ದಿಟ್ಟಿಸುತ್ತಾ ಅಸಹಾಯಕ ನಗೆ ಬೀರುತ್ತಾನೆ.

ಇನ್ನು ಬೆಂಡೆಕಾಯಿ, ಹುರಳಿಕಾಯಿ ಎಳೆಯದೋ ಬಲಿತಿದೆಯೋ ಎಂದು ತಿಳಿಯಲು ಮುರಿದು ನೋಡುವ ಕೆಲವರ ಕೆಟ್ಟ ಚಟದಿಂದಾಗಿ ಒಂದಿಷ್ಟು ತರಕಾರಿಗಳು ತುಂಡಾಗಿ ಬಿದ್ದಿರುತ್ತವೆ. 'ಹೇಳಿದ್ರೆ ತಪ್ಪು ತಿಳ್ಕೊತಾರೆ, ಬ್ಯಾಸರ ಮಾಡಿಕೊಂತಾರೆ,' ಅನ್ನುತ್ತಾನೆ ಹುಡುಗ ಅಲ್ಲ ಯುವಕ ಬಾಲನ್. ಕೊನೆಗೆ ಉಳಿದಿದ್ದನ್ನೆಲ್ಲಾ ಕಡಿಮೆ ದರದಲ್ಲಿ ಕ್ಯಾಂಟೀನ್ ಒಂದಕ್ಕೆ ಕೊಟ್ಟು ಮನೆಗೆ ಹೋಗುವಾಗ ರಾತ್ರಿಯೇ ಆಗಿಬಿಟ್ಟಿರುತ್ತದೆ.

ಹಾಗೆಯೇ ಬಾಲನ್ ಮನೆಯವರ ಬಗ್ಗೆ ಒಂದಿಷ್ಟು ವಿಷಯಗಳನ್ನು ಕಲೆ ಹಾಕಿದ್ದಾಗಿದೆ. ತಾಯಿತಂದೆ, ಅಣ್ಣಂದಿರು–ಅತ್ತಿಗೆಯರು ಎಲ್ಲರೂ ಇದ್ದಾರಂತೆ. ಕೊಳೆಗೇರಿಯಲ್ಲಿ ಇವರ ಎರಡು ಮನೆಗಳು ಇವೆಯಂತೆ. ಅಪ್ಪ ಕೆಲಸಕ್ಕೆ ಹೋಗದೆ ವರ್ಷಗಳೇ ಆಗಿವೆಯಂತೆ.

'ಅಪ್ಪ ಯಾಕೆ ಕೆಲಸಕ್ಕೆ ಹೋಗುತ್ತಿಲ್ಲ ಬಾಲನ್' ಎಂದು ಕೇಳಿದರೆ ಹುಡುಗನ ಮುಖ ಬಾಡುತ್ತದೆ.

'ಪಾಪ... ಅವರಿಗೆ ಕೆಮ್ಮುದಮ್ಮು, ನಿಶ್ಶಕ್ತಿ... ನಾವು ಕೆಲಸ ಮಾಡ್ತೀವಲ್ಲ... ಖರ್ಚಿಗೆ ಸಾಕಾಗುತ್ತೆ' ಎಂದು ಸಮಜಾಯಿಷಿ ನೀಡುತ್ತಾನೆ.

'ಕುಡಿದೂ ಕುಡಿದು ಕಾಯಿಲೆ ಬಂದಿದ್ದಾ? ಬೀಡಿ ಸೇದೋ ಚಟಾನೂ ಇದೆಯಾ ಹೇಗೆ?' ಮತ್ತಾರದೋ ಕುತೂಹಲದ ಪ್ರಶ್ನೆಗೂ ಬಾಲನ್ ತಬ್ಬಿಬ್ಬಾಗುವುದಿಲ್ಲ. 'ದೊಡ್ಡೋವ್ರ ವಿಷ್ಯ... ಬ್ಯಾಡ ಬಿಟ್ಟುಬಿಡಿ ಅಮ್ಮಾವರೆ... ನನಗೆ ತರಕಾರಿ ವ್ಯಾಪಾರ ಚೆನ್ನಾಗಿ ಆಗುತ್ತಲ್ಲ.' ಅದೆಂತಹ ಸಮಾಧಾನದ ಮನಃಸ್ಥಿತಿ... ಅದೆಷ್ಟು ತಾಳ್ಮೆ.

'ಅಮ್ಮಾ ಎಲ್ಲಾದರೂ ಕೆಲಸಕ್ಕೆ ಹೋಗ್ತಾರಾ?' ಎಂದು ಕೇಳಿದ್ದಕ್ಕೆ ಬಾಲನ್‌ನ ಕಳಕಳಿಯ ಉತ್ತರ ಸಿದ್ಧವಾಗಿರುತ್ತದೆ. 'ಬಿಡಿ ಅಮ್ಮ... ಪಾಪ... ಅವರು ಮನ್ಯಾಗೇ ಇರ್ಲಿ. ಮುದ್ದೆಸಾರು ಅಂತ ಎಲ್ಲಾ ಮಾಡ್ಬೇಕಲ್ಲವ್ರಾ...'

ಇಂತಹ ನಿರ್ಲಿಪ್ತ ಸ್ಥಿತಿ ಹೇಗೆ ಸಾಧಿಸಲಾದೀತು! ಎಷ್ಟೆಲ್ಲಾ ಎಚ್ಚರಿಕೆಯಿಂದ ಮಕ್ಕಳನ್ನು ಬೆಳೆಸಿದರೂ ಕಣ್ಣಲ್ಲಿ ಕಣ್ಣಿಟ್ಟು ಜಾಗ್ರತೆ ವಹಿಸಿದರೂ ಒಮ್ಮೊಮ್ಮೆ ಮಕ್ಕಳ ಬಾಯಲ್ಲಿ ಕೆಟ್ಟ ಶಬ್ದ ಬಂದುಬಿಡುತ್ತದಲ್ಲಾ. ಸಹವಾಸ ದೋಷವೆಂಬ ಭಯ ಅಡರಿಕೊಂಡು ಚಿಂತೆಯಲ್ಲಿ ಮುಳುಗುತ್ತೇವಲ್ಲಾ... ಈ ಹುಡುಗನ ಮನೆಯಲ್ಲಿ ಇನ್ನೆಂತಹ ವಾತಾವರಣವಿದ್ದೀತು. ಇಂತಹ ಸಮಾಧಾನ ಚಿತ್ತ ಹೇಗೆ ತಾನೆ ಸಿದ್ಧಿಸೀತು... ಬುದ್ಧಿವಂತ ಹುಡುಗ ಪ್ರಾಥಮಿಕ ಶಿಕ್ಷಣವನ್ನಷ್ಟೇ ಮುಗಿಸಿದ್ದಾನೆ. ಮನೆಯಲ್ಲಿ ಹಿರಿಯರ ಬೆಂಬಲ, ಪ್ರೋತ್ಸಾಹವಿದ್ದಿದ್ದರೆ ಏನೆಲ್ಲ ಸಾಧಿಸುತ್ತಿದ್ದನೋ ಈತ. ಆದರೆ ಅದಕ್ಕಾಗಿ ತಾಯಿತಂದೆಯರನ್ನಾಗಲಿ, ಅಣ್ಣಂದಿರನ್ನಾಗಲಿ ದೂರುವುದಿಲ್ಲ. ಗೊಣಗಾಟವಿಲ್ಲ. ಮೂರು ಪ್ಯಾಂಟ್, ಮೂರು ಶರ್ಟ್... ಅಷ್ಟೇ... ಅದನ್ನೇ ಬದಲಿಸಿಕೊಂಡು ಹಾಕಿಕೊಳ್ಳುತ್ತಾನೆ.

ಹಾಂ... ಅದೊಂದು ದಿನ ಅದೆಷ್ಟು ಖುಷಿ ಹುಡುಗನಿಗೆ... ಹೊಸ ತರಕಾರಿ ಗಾಡಿಯೊಂದನ್ನು ಕೊಂಡು, ಪೂಜೆ ಮಾಡಿಸಿಕೊಂಡು ಅದರಲ್ಲಿ ತರಕಾರಿ ಹಾಕಿಕೊಂಡು ಬಂದಿದ್ದ. 'ನೋಡಿಯಮ್ಮ... ಕೆಳಗೂ ತರಕಾರಿ ಮಡಿಕ್ಕಂಬೌದು... ಒಳ್ಳೇ ಮರದಾಗೆ ಮಾಡೌರೆ. ತಿಂಗಳೂ, ತಿಂಗಳೂ ಇಷ್ಟಿಷ್ಟು ಸಾಲ ತೀರಿಸಿಬಿಡ್ತೀನಿ' ಎಂದು ಹೇಳುವಾಗ ಬಾಲನ್‌ನ ಮುಖದ ತುಂಬಾ ಸಂತೋಷದ ಸುಗ್ಗಿ. ಪ್ರಾಯಶಃ ಹೆಲಿಕಾಪ್ಟರ್ ಕೊಂಡವರೂ ಇಷ್ಟು ಸಂತೋಷದಿಂದಿರಲಾರರು. ಹಣದ ಮೌಲ್ಯಕ್ಕಿಂತ ಮನಸ್ಸಿನ ಸಂತೃಪ್ತಿ, ಇರುವುದರಲ್ಲೇ